(Pages : 15)

# 3123-A21-ISC-R-N-14

## FIRST SEMESTER B.Com. DEGREE EXAMINATION, 2014

**Financial Accounting (Revised)**

**Paper - I**

Time : 3 Hours

Maximum : 80 Marks

***Instructions to Candidates***

1) Attempt **all** sections according to internal choice.

ಆಂತರಿಕ ಆಯ್ಕೆ ಪ್ರಕಾರ ಎಲ್ಲ ವಿಭಾಗಗಳನ್ನು ಉತ್ತರಿಸಿರಿ.

2) Use of simple and Un-programmable **calculator** is allowed.

ಸರಳ, ಸಂಯೋಜಿಸಲಾಗದ ಕ್ಯಾಲ್ಕುಲೇಟರ ಉಪಯೋಗಿಸಬಹುದು.

**Section - A**

**ವಿಭಾಗ - ಅ**

1. Answer any **ten** of the following questions **(10×2=20)**

ಬೇಕಾದ ಹತ್ತಕ್ಕೆ ಉತ್ತರಿಸಿರಿ.

a) Who is a Solvent Partner ?

ಸಾಲ ತೀರಿಸತಕ್ಕ ಪಾಲುದಾರನೆಂದರೆ ಯಾರು ?

b) What is the rule in Garner V/s Murray case ?

ಗಾರ್ನರ್.ವಿ.ಮರ್ರೇ ಕೇಸಿನಲ್ಲಿ ಇರುವ ನಿಯಮ ಯಾವದು ?

c) What is piecemeal distribution of cash ?

ನಗದು ತುಣುಕು ವಿತರಣೆ ಎಂದರೇನು ?

d) What is purchase consideration ?

ಖರೀದಿ ಮೌಲ್ಯ ಎಂದರೇನು ?

e) What is statement of Affairs ?

ಸ್ಥಿತಿಗತಿ ಪಟ್ಟಿ ಎಂದರೇನು ?

f) What is joint venture ?

ಜಂಟಿ ವ್ಯವಹಾರ ಎಂದರೇನು ?

g) Give any two demerits of single Entry System ?

ಏಕ ನಮೂದು ಪದ್ಧತಿಯ ಯಾವುದಾದರು ಎರಡು ಅನಾನುಕೂಲತೆಗಳನ್ನು ನೀಡಿರಿ.

h) What is royalty ? What are the different types of royalties ?

ರಾಜಸ್ವ ಎಂದರೇನು ? ವಿವಿಧ ಪ್ರಕಾರದ ರಾಜಸ್ವಗಳಾವವು ?

i) Why you prepare total creditors account.

ಒಟ್ಟು ಸಾಲಿಗರ ಖಾತೆಯನ್ನು ನೀವು ಯಾಕೆ ತಯಾರಿಸುವಿರಿ.

j) What journal entry is passed by the lessee for irrecoverable short workings of Rs.5000 ?

ರೂ. 5000 ದುಡಿಮೆ ಕೊರತೆಯು ವಸೂಲಾಗದಿದ್ದಲ್ಲಿ ಬಾಡಿಗೆದಾರನು ಯಾವ ರೋಜು ದಾಖಲೆಯನ್ನು ಬರೆಯುವನು ?

k) P and N. are partners sharing profits and losses in the ratio of 2:1, their capitals as per balance sheet is Rs 61000 and 43000 respectively. Their realization profit is Rs. 21000/- find their capital ratio. (Adjusted)

P ಮತ್ತು N ಎಂಬುವರು ಪಾಲುದಾರರಿದ್ದು ಲಾಭ ಮತ್ತು ನಷ್ಟಗಳನ್ನು 2:1 ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು. ಅಢಾವೆ ಪತ್ರಿಕೆ ಪ್ರಕಾರ ಅವರ ಬಂಡವಾಳ ರೂ. 61000 ಮತ್ತು 43000 ಅನುಕ್ರಮವಾಗಿ ಇರುತ್ತದೆ. ಅವರ ಆಸ್ತಿ ವಿಲೇವಾರಿ ಲಾಭ ರೂ. 21000 ಇದ್ದರೆ. ಅವರ ಬಂಡವಾಳ ಹೊಂದಾಣಿಕೆ ಪ್ರಮಾಣವನ್ನು ಕಂಡುಹಿಡಿಯಿರಿ.

l) What is memorandum joint venture account ?

ಜ್ಞಾಪನಾ ಜಂಟಿ ವ್ಯವಹಾರ ಖಾತೆ ಎಂದರೇನು ?

## Section - B

## ವಿಭಾಗ - ಬ

Answer any **three** of the following. **(3×5=15)**

ಯಾವುದಾದರೂ ಮೂರಕ್ಕೆ ಉತ್ತರಿಸಿರಿ.

2. Distinguish between joint venture and partnership.

ಜಂಟೀ ವ್ಯವಹಾರ ಮತ್ತು ಪಾಲುಗಾರಿಕೆ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.

3. A, B and C are partners sharing profits and losses in the ratio of 2:1:1 respectively. They decided to dissolve their firm when their capital balances stood as follows.

A : Rs. 20,000, B : Rs. 20,000 and C : Rs. 12,000

Find out excess capital of the Partners.

ಎ, ಬಿ ಮತ್ತು ಸಿ ಪಾಲುಗಾರರಾಗಿದ್ದು ಕ್ರಮವಾಗಿ 2:1:1 ಪ್ರಮಾಣದಲ್ಲಿ ಲಾಭ ಹಾನಿಗಳನ್ನು ಹಂಚಿಕೊಳ್ಳುವವರಾಗಿದ್ದಾರೆ. ಅವರು ತಮ್ಮ ಸಂಸ್ಥೆಯನ್ನು ವಿಸರ್ಜಿಸಲು ತೀರ್ಮಾನಿಸಿದಾಗ, ಅವರ ಬಂಡವಾಳ ಬಾಕಿ ಈ ಕೆಳಗಿನಂತೆ ಇರುತ್ತದೆ.

ಎ = ರೂ. 20,000 ಬಿ = ರೂ. 20,000 ಮತ್ತು ಸಿ = ರೂ. 12,000

ಈ ಮೇಲಿನ ವಿವರಗಳಿಂದ ಪಾಲುಗಾರರ ಹೆಚ್ಚುವರಿ ಬಂಡವಾಳ ಕಂಡುಹಿಡಿಯಿರಿ.

**4.** Find out the credit purchases from the following information provided by Mr.Arun.

| | Rs. |
|---|---|
| Creditors on 1-4-2013 | 60,000 |
| Creditors on 31-3-2014 | 40,000 |
| Cash paid to creditors | 3,00,000 |
| Purchased machinery on credit | 2,00,000 |
| Return outwards (goods) | 10,000 |
| Bills payable accepted | 1,02,000 |
| Discount received | 10,000 |
| Bills payable dishonoured | 2,000 |

ಈ ಕೆಳಗಿನ ವಿವರಗಳಿಂದ ಉದ್ರಿ ಖರೀದಿಯನ್ನು ಕಂಡುಹಿಡಿಯಿರಿ. ಕೆಳಗಿನ ಮಾಹಿತಿಯನ್ನು ಅರುಣರವರು ನೀಡಿರುತ್ತಾರೆ.

| | ರೂ. |
|---|---|
| ಸಾಲಿಗರು 1-4-2013 | 60,000 |
| ಸಾಲಿಗರು 31-3-2014 | 40,000 |
| ಸಾಲಿಗರಿಗೆ ಹಣ ನೀಡಿದ್ದು | 3,00,000 |
| ಯಂತ್ರೋಪಕರಣ ಉದ್ರಿ ಖರೀದಿ | 2,00,000 |
| ಖರೀದಿಸಿದ ಸರಕುಗಳನ್ನು ಪರತ ಮಾಡಿದ್ದು | 10,000 |
| ಕೊಡತಕ್ಕ ಹುಂಡಿಗಳ ಸ್ವೀಕೃತಿ ನೀಡಿದ್ದು | 1,02,000 |
| ಸೋಡಿ ಸ್ವೀಕರಿಸಿದ್ದು | 10,000 |
| ಕೊಡತಕ್ಕ ಹುಂಡಿಗಳನ್ನು ನಿರಾಕರಿಸಿದ್ದು | 2,000 |

5. P.Co.Ltd. agreed to take over the business of a firm as under.

| | |
|---|---|
| Machinery | 25,000 |
| Land and Building | 50,000 |
| Stock | 24,000 |
| Debtors | 21,000 |
| Goodwill | 20,000 |

The company also agreed to take over it creditors Rs.16,000 and bills payable Rs.14,000. The purchase consideration was settled by the issue of 10,000 equity shares of Rs.10 each and balance in cash.

Calculate purchase consideration.

ಪಿ. ಕಂಪನಿಯವರು ಪಾಲುದಾರಿಕಾ ಸಂಸ್ಥೆಯ ವ್ಯವಹಾರವನ್ನು ಈ ಕೆಳಗಿನಂತೆ ತೆಗೆದುಕೊಳ್ಳಲು ಒಪ್ಪಿಕೊಂಡಿದ್ದಾರೆ.

| | |
|---|---|
| ಯಂತ್ರೋಪಕರಣ | ರೂ. 25,000 |
| ಭೂಮಿ ಮತ್ತು ಕಟ್ಟಡ | ರೂ. 50,000 |
| ದಾಸ್ತಾನು | ರೂ. 24,000 |
| ಸಾಲಗಾರರು | ರೂ. 21,000 |
| ಸುನಾಮ | ರೂ. 20,000 |

ಕಂಪನಿಯು ಸಾಲಿಗರು ಮತ್ತು ಕೊಡತಕ್ಕ ಹುಂಡಿಗಳನ್ನು ಕ್ರಮವಾಗಿ ರೂ. 16,000 ಮತ್ತು ರೂ. 14,000 ಗಳಿಗೆ ತೆಗೆದುಕೊಳ್ಳಲು ಒಪ್ಪಿಕೊಂಡಿರುತ್ತಾರೆ. ಖರೀದಿ ಮೌಲ್ಯವನ್ನು 10,000 ಮಾಲಕೀಯ ಶೇರು ಪ್ರತಿ ಶೇರಿನ ಬೆಲೆ ರೂ. 10 ರಂತೆ ಮತ್ತು ಉಳಿದದ್ದನ್ನು ನಗದು ರೂಪದಲ್ಲಿ ನೀಡಲು ಒಪ್ಪಿರುತ್ತದೆ.

ಖರೀದಿ ಮೌಲ್ಯವನ್ನು ಕಂಡುಹಿಡಿಯಿರಿ.

6. From the following information prepare Royalty payable chart.

Saptakoteshwar minerals Ltd. leased a property from Mr. Shekhar at a Royalty of Rs. 1.50 per tonne raised with a minimum rent of Rs. 10,000 per annum. Each years excess of minimum rent over the royalties is recoverable out of the royalties of next three years. In the event of strike, the lease provides for the proportionate reduction of minimum rent for that year. Accounts are to be settled every year on 31st December.

The annual output for five years was as follows.

| Year : | 2009 | 2010 | 2011 | 2012 | 2013 |
|---|---|---|---|---|---|
| Output : | 4000 | 5000 | 6000 | 10000 | 4000 |
| (in tonnes) | | | | | (strike for 3 months) |

ಈ ಕೆಳಗಿನ ಮಾಹಿತಿಯಿಂದ ರಾಜಸ್ವ - ಪಟ್ಟಿಕೆಯನ್ನು ತಯಾರಿಸಿರಿ.

ಸಪ್ತಕೋಟಿಶ್ವರ ಮಿನರಲ್ಸ ಲಿಮಿಟೆಡ್‌ರವರು ತಮ್ಮ ಆಸ್ತಿಯನ್ನು ಮಿ. ಶೇಖರರವರಿಗೆ ರಾಜಸ್ವ ಪ್ರತಿ ಟನ್ನಿಗೆ ರೂ. 1.50 ರಂತೆ ಕನಿಷ್ಠ ಬಾಡಿಗೆ ಪ್ರತಿ ವರ್ಷಕ್ಕೆ ರೂ. 10,000 ರಂತೆ ಬಾಡಿಗೆಗೆ ನೀಡಿದೆ. ಪ್ರತಿ ವರ್ಷ ರಾಜಸ್ವಕ್ಕಿಂತ ಹೆಚ್ಚಾದ ಕನಿಷ್ಠ ಬಾಡಿಗೆಯನ್ನು ಮುಂದಿನ ಮೂರು ವರ್ಷಗಳಲ್ಲಿ ವಸೂಲು ಮಾಡಲು ಒಪ್ಪಂದದಲ್ಲಿ ಅವಕಾಶವಿರುತ್ತದೆ. ಮುಷ್ಕರದ ವರ್ಷದಲ್ಲಿ ಕನಿಷ್ಠ ಬಾಡಿಗೆಯನ್ನು ಸರಾಸರಿ ಅನುಪಾತದನ್ವಯ ಕಡಿಮೆಗೊಳಿಸಬಹುದಾಗಿದೆ. ಪ್ರತಿ ವರ್ಷ 31 ಡಿಸೆಂಬರ ರಂದು ಖಾತೆಯನ್ನು ಚುಕ್ತಾಮಾಡಬೇಕಾಗಿದೆ.

| | | | | | |
|---|---|---|---|---|---|
| ವರ್ಷ : | 2009 | 2010 | 2011 | 2012 | 2013 |
| ಉತ್ಪಾದನೆ : (ಟನ್‌ಗಳಲ್ಲಿ) | 4000 | 5000 | 6000 | 10000 | 4000 (3 ತಿಂಗಳು ಮುಷ್ಕರ) |

7. Mahesh bought goods of the value of Rs. 10,000 and consigned them to suresh to be sold on joint venture, profits being divided equally. He paid Rs. 500 for freight and insurance and drew on Suresh for Rs. 3000. Suresh paid Rs. 300 for storage and 200 for rent. The sales realized Rs. 20,000 and sales expenses of Rs. 700 paid by Suresh.

The final payment is made by Suresh after deducting 10% commission on the gross sales by Bank draft.

Prepare joint venture A/c and Suresh's A/c in the books of Mahesh.

ಮಹೇಶ ಇವರು ರೂ. 10,000 ಮೌಲ್ಯದ ಸರಕುಗಳನ್ನು ಕೊಂಡು ಜಂಟೀ ವ್ಯವಹಾರದಡಿ ಮಾರಾಟ ಮಾಡಲು ಸುರೇಶರವರಿಗೆ ರವಾನಿಸಿದ್ದಾರೆ. ಅವರು ಲಾಭಹಾನಿಗಳನ್ನು ಸಮನಾಗಿ ಹಂಚಿಕೊಳ್ಳಲು ಒಪ್ಪಿಕೊಂಡಿದ್ದಾರೆ. ಅವರು ಗಾಡಿ ಬಾಡಿಗೆ ಹಾಗೂ ವಿಮೆಗಾಗಿ ರೂ. 500 ಕೊಟ್ಟಿದ್ದಾರೆ. ಮತ್ತು ಸುರೇಶರವರ ಮೇಲೆ ರೂ. 3000ದ ಹುಂಡಿಯನ್ನು ಬರೆದಿದ್ದಾರೆ. ಸುರೇಶರವರು ಸರಕುಗಳ ದಾಸ್ತಾನಿಗಾಗಿ ರೂ. 300 ಮತ್ತು ಬಾಡಿಗೆ ರೂ. 200ನ್ನು ಕೊಟ್ಟಿದ್ದಾರೆ. ಸರಕು ಮಾರಾಟದ ವೆಚ್ಚ ರೂ. 700ರನ್ನು ಸುರೇಶರವರು ನೀಡಿದ್ದಾರೆ. ಅವರು ಇಡೀ ಸರಕುಗಳನ್ನು ರೂ. 20,000 ಗಳಿಗೆ ಮಾರಾಟ ಮಾಡಿದ್ದಾರೆ. ಸುರೇಶರವರು ಕೊಡಬೇಕಾದ ಹಣವನ್ನು ಒಟ್ಟು ಮಾರಾಟದ ಮೇಲೆ 10% ಕಮಿಷನ್ ತೆಗೆದು ಉಳಿದ ಹಣವನ್ನು ಬ್ಯಾಂಕ ಹುಂಡಿಯ ಮುಖಾಂತರ ರವಾನಿಸಿದ್ದಾರೆ.

ಮಹೇಶನ ಲೆಕ್ಕದ ಪುಸ್ತಕದಲ್ಲಿ 1 ಜಂಟಿ ಸಾಹಸ ಖಾತೆ ಮತ್ತು ಸುರೇಶನ ಖಾತೆಯನ್ನು ತಯಾರಿಸಿರಿ.

## Section - C

## ವಿಭಾಗ - ಕ

Question No.13 is compulsory. Attempt any **two** of the remaining. **(3×15=45)**

ಪ್ರಶ್ನೆ **13** ಕಡ್ಡಾಯವಾಗಿದೆ. ಇನ್ನುಳಿದವುಗಳಲ್ಲಿ ಬೇಕಾದ ಎರಡಕ್ಕೆ ಉತ್ತರಿಸಿ.

**8.** X, Y and Z were partners in a firm sharing profits and losses in the ratio 5:3:2. The following is the balance sheet when they decided to dissolve the firm.

| Liabilities | Rs. | Assets | Rs. |
|---|---|---|---|
| Capital | | Cash | 1,500 |
| X | 10,000 | Debtors | 12,500 |
| Y | 5,000 | Machinery | 17,500 |
| Creditors | 45,000 | Buildings | 20,000 |
| Bills payable | 15,000 | Stock | 15,000 |
| | | Z's capital | 8,500 |
| | 75,000 | | 75,000 |

The assets realized as follows.

a) Stock realized 50% of the book value.

b) Debtors realized 20% less than the book value.

c) Machinery realized at Rs. 9,000.

d) Building realized at Rs. 18,500.

Unfortunately all the partners become insolvent, however, the following amounts were received from the surplus of their private assets.

X - Rs. 3,000, Y Rs. 500 and Z Nil

Show the necessary ledger accounts to close the books of the firm.

X, Y ಮತ್ತು Z ಒಂದು ಪಾಲುದಾರಿಕೆಯ ಸಂಸ್ಥೆಯ ಪಾಲುಗಾರನಾಗಿದ್ದು ಅವರು ಲಾಭ ಮತ್ತು ನಷ್ಟವನ್ನು 5:3:2 ಪ್ರಮಾಣದಲ್ಲಿ ಹಂಚಿಕೊಳ್ಳುವರು ಅವರು ತಮ್ಮ ಸಂಸ್ಥೆಯನ್ನು ವಿಸರ್ಜನೆ ಮಾಡಬೇಕೆಂದು ಬಯಸಿದಾಗ ಅವರ ಅಢಾವೆ ಪತ್ರಿಕೆಯು ಈ ಕೆಳಗಿನಂತಿದೆ.

31-3-2014ಕ್ಕೆ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ಬಂಡವಾಳ | | ನಗದು | 1,500 |
| X | 10,000 | ಸಾಲಗಾರರು | 12,500 |
| Y | 5,000 | ಯಂತ್ರೋಪಕರಣ | 17,500 |
| ಸಾಲಿಗರು | 45,000 | ಕಟ್ಟಡಗಳು | 20,000 |
| ಕೊಡತಕ್ಕ ಹುಂಡಿಗಳು | 15,000 | ದಾಸ್ತಾನು | 15,000 |
| | | Z' ಯ ಬಂಡವಾಳ | 8,500 |
| | 75,000 | | 75,000 |

ಸ್ವತ್ತುಗಳು ಈ ಕೆಳಗಿನಂತೆ ನಗದೀಕರಣಗೊಂಡಿವೆ.

a) ದಾಸ್ತಾನು ಪುಸ್ತಕ ಮೌಲ್ಯದ ಶೇಕಡಾ 50 ರಷ್ಟು ಇದೆ.

b) ಸಾಲಗಾರರಿಂದ ಪುಸ್ತಕ ಮೌಲ್ಯಕ್ಕಿಂತ ಶೇಕಡಾ 20 ಕಡಿಮೆ ವಸೂಲಾಗಿದೆ.

c) ಯಂತ್ರೋಪಕರಣವು ರೂ. 9,000 ಕ್ಕೆ ವಿಕ್ರಯವಾಗಿದೆ.

d) ಕಟ್ಟಡಗಳು ರೂ. 18,500ಕ್ಕೆ ವಿಕ್ರಯವಾಗಿದೆ.

ದುರ್ದೈವದಿಂದ ಎಲ್ಲ ಪಾಲುದಾರರು ದೀವಾಳಿ ತೆಗೆದಿರುತ್ತಾರೆ. ಆದರೂ ಅವರ ಸ್ವಂತ ಆಸ್ತಿಗಳಿಂದ ಈ ಕೆಳಗಿನಂತೆ ಹಣ ವಸೂಲಾಗಿರುತ್ತದೆ.

X ರೂ. 3000, Y ರೂ. 500 ಹಾಗು Z ಏನೂ ಇಲ್ಲ.

ಸಂಸ್ಥೆಯ ಲೆಕ್ಕ ಪುಸ್ತಕವನ್ನು ಮುಚ್ಚಲು ಅವಶ್ಯಕ ಖಾತೆ ತೆರೆಯಿರಿ.

9. Mr. Somesh kept his books under single entry system. During the year ended 31-12-2013 his cash transactions were as under.

| Receipts | Rs. | Payments | Rs. |
|---|---|---|---|
| Fresh capital brought | | Paid to creditors | 28,200 |
| in cash | 15,200 | Wages | 1,500 |
| Collection from | | Salaries | 800 |
| debtors | 22,000 | Rent | 1,200 |
| Cash sales | 1,200 | Drawings | 3,300 |

The assets and liabilities were as follows.

| | 1-1-2013 | 31-12-2013 |
|---|---|---|
| | Rs. | Rs. |
| S' debtors | 1,400 | 2,000 |
| S' Creditors | 2,730 | 3,000 |
| Stock | 2,000 | 12,000 |
| Land and buildings | 4,000 | 4,000 |

| | | |
|---|---|---|
| Cash at Bank | 830 | 4,230 |
| Furniture | 1,000 | 1,000 |
| Capital | 6,500 | - |

Depreciate Land and building by 10%.

Depreciate Furniture by 10%.

Provide for doubtful debts at 5% an debtor.

Prepare :

a) Total debtors account

b) Total creditors account

c) Trading and profit and loss account for the year ending 31-12-2013.

d) Balance sheet as on 31-12-2013.

ಸೋಮೇಶ ತಮ್ಮ ಲೆಕ್ಕ ಪುಸ್ತಕಗಳನ್ನು ಏಕ ನಮೂದು ಪದ್ಧತಿಯಲ್ಲಿ ಇಟ್ಟಿರುತ್ತಾರೆ. 31-12-2013ಕ್ಕೆ ಕೊನೆಗೊಂಡಂತೆ ಅವರ ನಗದು ವ್ಯವಹಾರಗಳು ಈ ಕೆಳಗಿನಂತಿವೆ.

| ಸ್ವೀಕೃತಿಗಳು | ರೂ. | ಪಾವತಿಗಳು | ರೂ. |
|---|---|---|---|
| ಹೊಸದಾಗಿ ಬಂಡವಾಳ ನಗದು | | ಸಾಲಿಗರಿಗೆ ಪಾವತಿಸಿದ್ದು | 28,200 |
| ರೂಪದಲ್ಲಿ ತಂದದ್ದು | 15,200 | ಕೂಲಿ | 1,500 |
| ಸಾಲಗಾರರಿಂದ ಪಡೆದದ್ದು | 22,000 | ಸಂಬಳ | 800 |
| ನಗದು ವಿಕ್ರಯಗಳು | 1,200 | ಬಾಡಿಗೆ | 1,200 |
| | | ಸ್ವಂತಕ್ಕೆ ತೆಗೆದುಕೊಂಡದ್ದು | 3,300 |

ಅವರ ಆಸ್ತಿಗಳು ಹಾಗು ಹೊಣೆಗಾರಿಕೆಗಳು ಈ ಕೆಳಗಿನಂತೆ ಇವೆ.

| | 1-1-2013 | 31-12-2013 |
|---|---|---|
| | ರೂ. | ರೂ. |
| ಸಾಲಗಾರರು | 1,400 | 2,000 |
| ಸಾಲಿಗರು | 2,730 | 3,000 |
| ದಾಸ್ತಾನು | 2,000 | 12,000 |
| ಭೂಮಿ ಮತ್ತು ಕಟ್ಟಡಗಳು | 4,000 | 4,000 |
| ಪೀಠೋಪಕರಣ | 1,000 | 1,000 |
| ಬ್ಯಾಂಕಿನಲ್ಲಿಯ ಶಿಲ್ಕು | 830 | 4,230 |
| ಬಂಡವಾಳ | 6,500 | - |

ಭೂಮಿ ಮತ್ತು ಕಟ್ಟಡಗಳ ಮೇಲೆ 5% ಮತ್ತು ಪೀಠೋಪಕರಣದ ಮೇಲೆ 10% ಸವಕಳಿ ತೆಗೆಯಿರಿ. ಸಂಶಯಾಸ್ಪದ ಕರಡು ಸಾಲಕ್ಕೆ 5% ಸಾಲಗಾರರ ಮೇಲೆ ತಯಾರಿಸಿರಿ.

ತಯಾರಿಸಿರಿ :

a) ಒಟ್ಟು ಸಾಲಗಾರರ ಖಾತೆ

b) ಒಟ್ಟು ಸಾಲಿಗರ ಖಾತೆ

c) 31-12-2013ಕ್ಕೆ ಕೊನೆಗೊಂಡಂತೆ ವ್ಯಾಪಾರ, ಲಾಭ ಮತ್ತು ನಷ್ಟ ಖಾತೆ

d) 31-12-2013ಕ್ಕೆ ಆಢಾವೆ ಪತ್ರಿಕೆ.

10. A, B and C are partners in a firm sharing profits and losses equally. They dissolved their firm. The balance sheet on 1-4-2014 was as under:

| Liabilities | Rs. | Assets | Rs. |
|---|---|---|---|
| Sundry Creditors | 80,000 | Bank | 20,000 |
| Bank overdraft | 20,000 | Stock | 30,000 |
| (secured by stock) | | Other assets | 4,58,000 |
| A's loan | 48,000 | | |
| Reserve fund | 60,000 | | |
| Partners capital - A | 80,000 | | |
| B | 1,20,000 | | |
| C | 1,00,000 | | |
| Total | 5,08,000 | Total | 5,08,000 |

The assets were realized and cash was paid as and when realized. Following are the details of realizations.

April - Stock Rs. 30,000; Rs. other assets Rs. 36,000; Expenses Rs. 6000.

May - Other assets Rs. 300000; Expenses Rs. 9000.

June - other assets Rs. 62000; Expenses Rs. 2000.

June - assets taken over by partner B - Rs. 24000.

Prepare a statement showing piecemeal distribution of cash.

A, B ಮತ್ತು C ಇವರುಗಳು ಪಾಲುಗಾರಿಕೆ ಸಂಸ್ಥೆಯಲ್ಲಿ ಪಾಲುಗಾರರಾಗಿದ್ದು ಲಾಭ ಮತ್ತು ಹಾನಿಯನ್ನು ಸಮಾನಾಗಿ ಹಂಚಿಕೊಳ್ಳುತ್ತಾರೆ. ಅವರು ಸಂಸ್ಥೆಯನ್ನು ಸಮಾಪನಗೊಳಿಸಿದ್ದರೆ ದಿನಾಂಕ 1-4-2014 ರಂದು ಅವರ ಆಢಾವೆ ಪತ್ರಿಕೆಯು ಈ ಕೆಳಗಿನಂತಿತ್ತು.

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ಕೊಡತಕ್ಕ ಸಾಲಗಳು | 80,000 | ಬ್ಯಾಂಕ ಶಿಲ್ಕು | 20,000 |
| ಬ್ಯಾಂಕ ಮುಂಗಡ ಸಾಲ | 20,000 | ದಾಸ್ತಾನುಗಳು | 30,000 |
| (ದಾಸ್ತಾನುಗಳ ಭದ್ರತೆ) | | ಇತರೆ ಆಸ್ತಿಗಳು | 4,58,000 |
| A ರವರ ಸಾಲ | 48,000 | | |
| ಕಾಯ್ದಿಟ್ಟ ನಿಧಿ | 60,000 | | |
| ಪಾಲುಗಾರರ ಬಂಡವಾಳ- A | 80,000 | | |
| B | 1,20,000 | | |
| C | 1,00,000 | | |
| ಒಟ್ಟು | 5,08,000 | ಒಟ್ಟು | 5,08,000 |

ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಮತ್ತು ಮಾರಾಟದ ಹಣ ಬಂದ ಹಾಗೆ ಅವುಗಳನ್ನು ಪಾವತಿಸಲಾಗಿದೆ. ಮಾರಾಟದ ವಿವರಗಳು ಈ ಕೆಳಗಿನಂತಿವೆ.

ಏಪ್ರಿಲ್ :- ದಾಸ್ತಾನುಗಳು ರೂ. 30,000; ಇತರೆ ಆಸ್ತಿಗಳು ರೂ. 36,000; ಖರ್ಚುಗಳು ರೂ. 6,000.

ಮೇ :- ಇತರ ಆಸ್ತಿಗಳು ರೂ. 3,00,000; ಖರ್ಚುಗಳು ರೂ. 9,000.

ಜೂನ :- ಇತರ ಆಸ್ತಿಗಳು ರೂ. 62,000; ಖರ್ಚುಗಳು ರೂ. 2,000.

ಜೂನ :- ಪಾಲುಗಾರ B ವಹಿಸಿಕೊಂಡ ಆಸ್ತಿಗಳು ರೂ. 24,000

ಹಂತ ಹಂತವಾಗಿ ನಗದು ಪಾವತಿಯನ್ನು ತೋರಿಸುವ ತಖ್ತೆಯನ್ನು ತಯಾರಿಸಿರಿ.

11. A coal company took a mine on lease from a landlord at royalty of Rs.4 per tonne of coal raised with a minimum rent of Rs.80000 per annum. The other terms of agreement were as follows :

ಕೋಲ ಕಂಪನಿಯ ಓರ್ವ ಭೂ ಮಾಲಕನಿಂದ ಗೇಣಿಗೆ ಪಡೆದಿದೆ. ಪ್ರತಿ ಟನ್ ಕೋಲ ಉತ್ಪಾದನೆಗೆ ರೂ. 4 ರಂತೆ ರಾಜಸ್ವವನ್ನು ನೀಡುವದು ಹಾಗು ಕನಿಷ್ಠ ಬಾಡಿಗೆ ರೂ. 80,000 ವರ್ಷಕ್ಕೆ ನೀಡಬೇಕು. ಕರಾರಿನ ಇತರ ಅಂಶಗಳು :

a) Each year's excess of minimum rent over actual royalties earned shall be recoverable out of the excess royalties of next two years only.

ಪ್ರತಿ ವರ್ಷ ರಾಜಸ್ವಕ್ಕಿಂತ ಹೆಚ್ಚಾದ ಕನಿಷ್ಠ ಬಾಡಿಗೆಯನ್ನು ಮುಂದಿನ 2 ವರ್ಷಗಳಲ್ಲಿ ರಾಜಸ್ವ ಹೆಚ್ಚಾದಾಗ ವಸೂಲು ಮಾಡಲು ಒಪ್ಪಂದದಲ್ಲಿ ಅವಕಾಶವಿರುತ್ತದೆ.

b) In the event of strike actual royalties earned shall discharge all the rental obligations for that year.

ಮುಷ್ಕರದ ಘಟನೆಗಳು ನಡೆದಾಗ ಆ ವರ್ಷ ಗಳಿಸಿದ ರಾಜಸ್ವವು ಎಲ್ಲ ಬಾಡಿಗೆ ಹೊಣೆಗಾರಿಕೆಯನ್ನು ನಿಭಾಯಿಸಲು ಅವಕಾಶವಿರುತ್ತದೆ.

The results of the first 4 years were as under :

ಮೊದಲ ನಾಲ್ಕು ವರ್ಷಗಳ ಉತ್ಪಾದನೆಯ ವಿವರಗಳು ಈ ಕೆಳಗಿನಂತಿವೆ :

| Year (ವರ್ಷ) | Output (in tonnes) (ಉತ್ಪಾದನೆ ಟನ್‌ಗಳಲ್ಲಿ) |
|---|---|
| 2010 | 10000 |
| 2011(Strike for 3 months) (3 ತಿಂಗಳು ಮುಷ್ಕರ) | 15000 |
| 2012 | 25000 |
| 2013 | 30000 |

Prepare Royalty account, landlord account and short workings in the books of coal company.

ರಾಜಸ್ವಖಾತೆ, ಭೂ ಮಾಲಕನ ಖಾತೆ ಹಾಗೂ ದುಡಿಮೆ ಕೊರತೆ ಖಾತೆಗಳನ್ನು ಕೋಲ ಕಂಪನಿಯ ಪುಸ್ತಕದಲ್ಲಿ ತೋರಿಸಿರಿ.

12. A and B an independent civil contractors entered in to joint venture and took up a building contract for a public limited company for a contract price of Rs. 5,00,000 payable as to Rs. 4,00,000 by cash and Rs. 1,00,000 fully paid equity shares of new company. A joint bank account was opened in to which Mr. A paid Rs. 1,25,000 and Mr. B. Rs. 75,000. They agreed to share profits and losses in the ratio of 2:1 respectively. Their transactions were as follows :

Purchased materials Rs. 3,50,000

Wages paid Rs. 1,50,000.

Materials supplied by Mr. A Rs. 25,000.

Materials supplied by Mr. B Rs. 20,000.

Architect fees paid by Mr. A Rs. 10,000.

The contract was completed and price was duly received. The joint venture was closed by Mr. A taking up all the equity shares of the company at an agreed value of Rs. 80,000 and Mr. B taking up the stock of materials for Rs. 15,000

Prepare joint venture a/c, Joint Bank a/c and co-ventures a/c.

A ಮತ್ತು B ಸ್ವತಂತ್ರ ಸಿವಿಲ್ ಇಂಜನಿಯರುರುಗಳಾಗಿದ್ದು ಜಂಟಿ ವ್ಯವಹಾರವನ್ನು ಪ್ರಾರಂಭಿಸಿದರು ಹಾಗೂ ಸಾರ್ವಜನಿಕ ಕಂಪನಿಯ ಕಟ್ಟಡ ನಿರ್ಮಾಣ ಗುತ್ತಿಗೆಯನ್ನು ರೂ. 5,00,000 ಗುತ್ತಿಗೆ ಬೆಲೆಗೆ ತೆಗೆದುಕೊಂಡರು. ಈ ಗುತ್ತಿಗೆ ಬೆಲೆಯನ್ನು ರೂ. 4,00,000 ನಗದು ಹಾಗೂ ರೂ. 1,00,000ವನ್ನು ಪೂರ್ಣ ಸಂದಾಯವಾದ ಹೊಸ ಕಂಪನಿಯ ಇಕ್ವಿಟಿ ಶೇರುಗಳಲ್ಲಿ ಪಾವತಿಸಲಾಗುವದು.

ಜಂಟಿ ಬ್ಯಾಂಕ ಖಾತೆಯನ್ನು ತೆರೆದು ಅದರಲ್ಲಿ A ರೂ. 1,25,000 ಮೊತ್ತವನ್ನು ಹಾಗೂ B ರೂ. 75,000 ಮೊತ್ತವನ್ನು ಜಮಾ ಮಾಡಿದ್ದಾರೆ. ಲಾಭ ಮತ್ತು ಹಾನಿಯನ್ನು ಅನುಕ್ರಮವಾಗಿ 2:1 ಅನುಪಾತದಲ್ಲಿ ಹಂಚಿಕೊಳ್ಳಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಅವರ ವ್ಯವಹಾರದ ವಿವರಗಳು ಈ ಕೆಳಗಿನಂತಿದೆ :

ಸರಕುಗಳನ್ನು ಖರೀದಿಸಿದ್ದು - ರೂ. 3,50,000

ಕೂಲಿ ಪಾವತಿಸಿದ್ದು - ರೂ. 1,50,000

A ರವರು ಪೂರೈಸಿದ ಸರಕುಗಳು - ರೂ. 25,000

B ರವರು ಪೂರೈಸಿದ ಸರಕುಗಳು - ರೂ. 20,000

A ರವರು ವಿನ್ಯಾಸಗಾರನಿಗೆ ಪಾವತಿಸಿದ ಶುಲ್ಕ - ರೂ. 10,000

ಗುತ್ತಿಗೆಯನ್ನು ಪೂರ್ತಿ ನಿಭಾಯಿಸಲಾಗಿದೆ ಮತ್ತು ಬೆಲೆಯನ್ನು ಸ್ವೀಕರಿಸಲಾಗಿದೆ. ಮಿ. A ರವರು ಕಂಪನಿಯ ಎಲ್ಲ ಇಕ್ವಿಟಿ ಶೇರುಗಳನ್ನು ಒಪ್ಪಂದದ ಬೆಲೆ ರೂ. 80,000ಕ್ಕೆ ತೆಗೆದುಕೊಂಡಿದ್ದಾರೆ. ಹಾಗೂ ಮಿ. B ರವರು ಸರಕಿನ ದಾಸ್ತಾನುಗಳನ್ನು ರೂ. 15,000ಕ್ಕೆ ವಹಿಸಿಕೊಂಡು ಜಂಟಿ ವ್ಯವಹಾರವನ್ನು ಮುಗಿಸಿರುತ್ತಾರೆ.

ಜಂಟಿ ವ್ಯವಹಾರ ಖಾತೆ, ಜಂಟಿ ಬ್ಯಾಂಕ ಖಾತೆ ಹಾಗೂ ಸಹ ಜಂಟಿ ವ್ಯವಹಾರ ಖಾತೆದಾರರ ಖಾತೆಗಳನ್ನು ತಯಾರಿಸಿರಿ.

**13.** Case study questions (Compulsory).

Manu and Dhanu are the partners sharing profits and losses in the ratio of 3:2 due to heavy losses they decided to convert their firm into a company. The balance sheet of the firm as on 31-3-2014 was as follows:

| Liabilities | Rs. | Assets | Rs. |
|---|---|---|---|
| Partners capital account | | | |
| Manu | 9,00,000 | Investments | 2,50,000 |
| Dhanu | 6,00,000 | Machinery | 5,00,000 |
| Secured loan | 2,50,000 | Premises | 10,00,000 |
| (investments) | | Current assets | 5,00,000 |
| Sundry creditors | 6,00,000 | P & L account | 2,50,000 |
| Bills payable | 1,50,000 | | |
| Total | 25,00,000 | Total | 25,00,000 |

The company made following two proposals :

Proposal - I Secured loan will not be transferred to new company. Similarly investments is to be sold. It can fetch Rs. 50,000. The consideration will be Rs. 2,00,000 in cash and Rs. 12,00,000 in equity shares of Rs. 10 each fully paid.

Proposal - II The company to take over all the assets and liabilities. But machinery to be reduced by 10% secured loan will be reduced to 2,00,000. The payment will be in equity shares of Rs. 10 each in limited company.

The realization loss is estimated at : offer I - Rs. 50,000; offer II - Nil.



[Contd...

**Questions :**

1) Which proposal do you suggest ? Give reasons.

2) Prepare partners capital account in respect of each proposal to supplement your answer.

ಕಡ್ಡಾಯ ಪ್ರಶ್ನೆ (ಕೇಸ್ ವಿಶ್ಲೇಷಣೆ)

ಮನು ಮತ್ತು ಧನು ಪಾಲುದಾರರಾಗಿದ್ದು : ಲಾಭ ಮತ್ತು ಹಾನಿಗಳನ್ನು 3:2 ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ತುಂಬಾ ನಷ್ಟದಿಂದಾಗಿ ಅವರು ತಮ್ಮ ಪಾಲುದಾರಿಕೆ ಸಂಸ್ಥೆಯನ್ನು ಕಂಪನಿಯಾಗಿ ಪರಿವರ್ತಿಸಲು ನಿರ್ಧರಿಸಿದರು, ದಿನಾಂಕ 31-3-2014ರಂದು ಅವರ ಆಢಾವೆ ಪತ್ರಿಕೆಯು ಈ ಕೆಳಗಿನಂತಿದೆ.

| ಹೊಣೆಗಾರಿಕೆಗಳು | ರೂ. | ಆಸ್ತಿಗಳು | ರೂ. |
|---|---|---|---|
| ಪಾಲುಗಾರರ ಬಂಡವಾಳ ಖಾತೆ | | | |
| ಮನು | 9,00,000 | ಗುಂತಾಯಿಸಿದ್ದು | 2,50,000 |
| ಧನು | 6,00,000 | ಯಂತ್ರೋಪಕರಣಗಳು | 5,00,000 |
| ಭದ್ರತಾ ಸಾಲ | 2,50,000 | ಕಟ್ಟಡಗಳು | 10,00,000 |
| (ಗುಂತಾಯಿಸಿದ್ದರ ಮೇಲೆ) | | ಚಾಲ್ತಿ ಆಸ್ತಿಗಳು | 5,00,000 |
| ಕೊಡತಕ್ಕ ಸಾಲಗಳು | 6,00,000 | ಲಾಭ ಮತ್ತು ಹಾನಿ ಖಾತೆ | 2,50,000 |
| ಕೊಡತಕ್ಕ ಹುಂಡಿಗಳು | 1,50,000 | | |
| ಒಟ್ಟು | 25,00,000 | ಒಟ್ಟು | 25,00,000 |

ಕಂಪನಿಯು ಈ ಕೆಳಗಿನ ಎರಡು ಪ್ರಸ್ತಾವನೆಗಳನ್ನು ಮಾಡಿದೆ :

ಪ್ರಸ್ತಾವನೆ - I ಭದ್ರತಾಸಾಲವನ್ನು ಕಂಪನಿಗೆ ವರ್ಗಾವಣೆ ಮಾಡಲಾಗದು. ಅದೇರೀತಿ ಗುಂತಾಯಿಸಿದ್ದನ್ನು ಮಾರಾಟ ಮಾಡುವದು ಇದಕ್ಕೆ ರೂ. 50,000 ಬರಬಹುದು. ಖರೀದಿ ಮೌಲ್ಯವು ರೂ. 2,00,000 ನಗದು ಹಾಗೂ ರೂ. 12,00,000. ಪೂರ್ತಿ ಸಂದಾಯವಾದ ರೂ. 10 ಮುಖ ಬೆಲೆಯ ಇಕ್ವಿಟಿ ಶೇರುಗಳನ್ನು ಒಳಗೊಂಡಿರುತ್ತದೆ.

ಪ್ರಸ್ತಾವನೆ - II ಕಂಪನಿಯು ಎಲ್ಲ ಆಸ್ತಿ ಹಾಗೂ ಹೊಣೆಗಾರಿಕೆಯನ್ನು ವಹಿಸಿಕೊಳ್ಳುವುದು ಅದರೆ ಯಂತ್ರೋಪಕರಣ ಬೆಲೆಯನ್ನು ಶೇ. 10 ರಷ್ಟು ಕಡಿಮೆ ಮಾಡುವುದು ಮತ್ತು ಭದ್ರತಾ ಸಾಲವನ್ನು ರೂ. 2,00,000 ಕ್ಕೆ ಇಳಿಸುವದು. ಹಣಪಾವತಿಯು ನಿಯಮಿತ ಕಂಪನಿಯ ರೂ. 10 ಮುಖ ಬೆಲೆಯ ಇಕ್ವಿಟಿ ಶೇರುಗಳಲ್ಲಿ ಇರುತ್ತದೆ.

ನಗದೀಕರಣ ನಷ್ಟದ ಅಂದಾಜು - ಪ್ರಸ್ತಾವನೆ I ರೂ. 50,000.

ಪ್ರಸ್ತಾವನೆ II ರೂ. 'ಇಲ್ಲ'.

ಪ್ರಶ್ನೆಗಳು :

1) ಯಾವ ಪ್ರಸ್ತಾವನೆಯನ್ನು ನೀವು ಸಲಹೆ ಮಾಡುತ್ತೀರಿ ? ಕಾರಣವನ್ನು ನೀಡಿರಿ.

2) ಪ್ರತಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಪಾಲುಗಾರರ ಬಂಡವಾಳ ಖಾತೆಯನ್ನು ತೆಗೆದು ನಿಮ್ಮ ಉತ್ತರವನ್ನು ಸಮರ್ಥಿಸಿರಿ.

---